- ಕೆ.ಪಿ.ಸಿ.ಎಲ್.–3,654 ಮೆ.ವ್ಯಾ.
- ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್, ಬಿಜಾಪುರ ಜಿಲ್ಲೆ ಕುಡಿಗಿಯಲ್ಲಿ (ಎನ್.ಟಿ.ಪಿ.ಸಿ)–4,000 ಮೆ.ವ್ಯಾ. ಇದರಲ್ಲಿ ರಾಜ್ಯಕ್ಕೆ 2,000 ಮೆ.ವ್ಯಾ. ವಿದ್ಯುತ್ ಲಭ್ಯವಾಗಲಿದೆ.
- ಗುಲ್ಬರ್ಗಾ ಮತ್ತು ಘಟಪ್ರಭಗಳಲ್ಲಿ ಖಾಸಗೀ ವಲಯದಲ್ಲಿ ವಿದ್ಯುತ್ ಉತ್ಪಾದನಾ ಯೋಜನೆಗಳು 2,640 ಮೆ.ವ್ಯಾ.
- ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲು –1,079 ಮೆ.ವ್ಯಾ.
- ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ 2ನೇ ಘಟಕ –600 ಮೆ.ವ್ಯಾ.
- ಅಸಂಪ್ರದಾಯಕ ವಿದ್ಯುತ್ ಮೂಲಗಳಿಂದ –1,138 ಮೆ.ವ್ಯಾ.

619 ಶ್ರೀ ಸುರೇಶ್ ಬಾಬು.ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವ ರೈತರ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು;

ಆ) ಇವುಗಳಿಗೆ ವಿದ್ಯುತ್ ಸಂಪರ್ಕ ನೀಡಲು ತೊಂದರೆಗಳೇನು;

ಇ) ಇನ್ನೆಷ್ಟು ದಿನಗಳಲ್ಲಿ ರೈತರ ನೀರಾವರಿ ಪಂಪುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ರೈತರು ಕೃಷಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿ ಇಲಾಖೆಯಲ್ಲಿ ಯಾವುದೇ ಅರ್ಜಿಗಳು ನೊಂದಾವಣೆಯಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.